# ಶ್ರೀಶೈಲದಲ್ಲಿ ಮಲ್ಲಮ್ಮ ದರ್ಶನ

ಶ್ರೀಶೈಲದಲ್ಲಿ ಮಲ್ಲಿಕಾರ್ಜುನನ ದೇವಾಲಯದೊಂದಿಗೆ ಮಲ್ಲಮ್ಮನ ದೇವಾಲಯವೂ ಆಕರ್ಷಣೆಯ ಕೇಂದ್ರ.

■ ಚಿತ್ರ– ಬರಹ: **ಬೆನಕನಹಳ್ಳಿ ಶೇಖರ್‌ಗೌಡ**



ಶೈವ ಕ್ಷೇತ್ರಗಳಲ್ಲಿ ಆಂಧ್ರಪ್ರದೇಶದ ಶ್ರೀಶೈಲ ಕ್ಷೇತ್ರ ಪ್ರಮುಖವಾದದ್ದು. ಶ್ರಾವಣ ಮಾಸದಲ್ಲಿ ಭಕ್ತರು ಇಲ್ಲಿಗೆ ಭೇಟಿ ನೀಡುತ್ತಾರೆ. ದೇಶದಲ್ಲಿರುವ 12 ಜ್ಯೋತಿರ್ಲಿಂಗಗಳಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ಲಿಂಗವೂ ಒಂದು. ಶ್ರೀಶೈಲಕ್ಕೆ ಭೇಟಿ ನೀಡುವ ಬಹುತೇಕ ಯಾತ್ರಿಕರು ಶ್ರೀಶೈಲದಲ್ಲಿ ನಿರ್ಮಿಸಿರುವ ಮಲ್ಲಿಕಾರ್ಜುನನ ಪರಮಭಕ್ತೆ ಹೇಮರೆಡ್ಡಿ ಮಲ್ಲಮ್ಮನ ಆನಂದ ಬಾಷ್ಪದ ದರ್ಶನ ಪಡೆಯುತ್ತಾರೆ.

ವಿಶೇಷವಾಗಿ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಭಾಗದ ಬಹುತೇಕ ಭಕ್ತರು ಶ್ರೀಶೈಲಕ್ಕೆ ಭೇಟಿ ನೀಡುತ್ತಾರೆ. ಕ್ಷೇತ್ರಕ್ಕೆ ಹೋದವರು ಹೇಮರಡ್ಡಿ ಮಲ್ಲಮ್ಮನ ದರ್ಶನ ಮಾಡದಿದ್ದರೆ ಶ್ರೀಶೈಲದ ಯಾತ್ರೆ ಪೂರ್ಣಗೊಂಡಂತಾಗದು.

ಹೇಮರಡ್ಡಿ ಮಲ್ಲಮ್ಮನ ಆನಂದ ಭಾಷ್ಪ ಹರಿದಿದ್ದ, ತುಂಬಾ ಹಳೆಯ ಪುಟ್ಟ ಗೂಡಿನಂತಿದ್ದ ಕಲ್ಲಿನ ದೇವಾಲಯವಿದ್ದ ಸ್ಥಳದಲ್ಲಿ ಹೈದರಾಬಾದ್ ಕರ್ನಾಟಕದ ರೆಡ್ಡಿ ಸಮಾಜದ ಅಧ್ಯಕ್ಷ ವೈ.ಬಿ. ಆಲೂರು ಹಾಗೂ ಕಾರ್ಯದರ್ಶಿ ಶಾಂತಾರೆಡ್ಡಿ ದೇಸಾಯಿ ಅವರ ನೇತೃತ್ವದಲ್ಲಿ ಐದಾರು ವರ್ಷಗಳ ಹಿಂದೆ ಬೃಹತ್ ಸುಂದರ ದೇವಾಲಯ ನಿರ್ಮಾಣಗೊಂಡಿದೆ. ಈ ಮೂಲಕ ಕರ್ನಾಟಕ ಮತ್ತು ಅಂಧ್ರಪ್ರದೇಶಗಳ ಮಧುರ ಬಾಂಧವ್ಯ ಮತ್ತಷ್ಟು ಗಟ್ಟಿಗೊಂಡಿದೆ.

ಶ್ರೀಶೈಲದಲ್ಲಿ ಮಲ್ಲಿಕಾರ್ಜುನನ ದೇವಾಲಯದೊಂದಿಗೆ ಈಗ ಮಲ್ಲಮ್ಮನ ದೇವಾಲಯವೂ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ಶ್ರೀಶೈಲ ದೇವಾಲಯದ ಪೂರ್ವದ ಹಸಿರು ಬೆಟ್ಟದ ಮೇಲೆ ಎರಡು ಎಕರೆ ಪ್ರದೇಶದಲ್ಲಿ ಸುಮಾರು 2 ಕೋಟಿ ರೂಪಾಯಿ ವೆಚ್ಚದಲ್ಲಿ ಹೇಮರಡ್ಡಿ ಮಲ್ಲಮ್ಮನ ದೇವಾಲಯ ನಿರ್ಮಿಸಲಾಗಿದೆ.

ದೇವಾಲಯದ ನಿರ್ವಹಣೆಯನ್ನು ಆಂಧ್ರಪ್ರದೇಶ ಸರ್ಕಾರದ ಮುಜರಾಯಿ ಇಲಾಖೆ ವಹಿಸಿಕೊಳ್ಳಬೇಕೆಂಬ ದೇವಾಲಯ ಸಮಿತಿಯ ಕೋರಿಕೆಯನ್ನು ಅಂದಿನ ಆಂಧ್ರ ಮುಖ್ಯಮಂತ್ರಿ ರೋಸಯ್ಯ ಮನ್ನಿಸಿದ್ದರು. ಹಾಗೆಯೇ ಹೇಮರಡ್ಡಿ ಮಲ್ಲಮ್ಮ ದೇವಾಲಯದ ಬಳಿ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಸಮಿತಿಗೆ 2 ಎಕರೆ ಭೂಮಿ ನೀಡುವಂತೆ ಸ್ಥಳದಲ್ಲೇ ಕರ್ನೂಲು ಜಿಲ್ಲಾಧಿಕಾರಿಗೆ ಆದೇಶ ನೀಡಿದ್ದರು. ಆದರೆ ಅದಿನ್ನೂ ಕಾರ್ಯರೂಪಕ್ಕೆ ಬಂದಿಲ್ಲ.

ಹೇಮರಡ್ಡಿ ಮಲ್ಲಮ್ಮ ಕಣ್ಣೀರು (ಆನಂದ ಭಾಷ್ಪ) ದೇವಾಲಯಕ್ಕೆ ತೆರಳಲು ಆಂಧ್ರ ಸರ್ಕಾರ ಶ್ರೀಶೈಲದಲ್ಲಿ ಉತ್ತಮ ರಸ್ತೆ ನಿರ್ಮಾಣ ಮಾಡಿದೆ. ದೇವಾಲಯವನ್ನು ಆಂಧ್ರದ ಮುಜರಾಯಿ ಇಲಾಖೆಗೆ ಕಳೆದ ಮೇ ತಿಂಗಳಿನಲ್ಲಿ ವಹಿಸಲಾಗಿದೆ.

ದೇವಾಲಯದ ಬೃಹತ್ ಆವರಣದಲ್ಲಿ ಹೇಮರಡ್ಡಿ ಮಲ್ಲಮ್ಮನ ಐತಿಹಾಸಿಕ ಹಿನ್ನೆಲೆ ಬಿಂಬಿಸುವ ಪ್ರತಿಮೆಗಳು ವಿಶಿಷ್ಟವಾಗಿವೆ. ಶ್ರೀಶೈಲ ಮಲ್ಲಿಕಾರ್ಜುನ ದರ್ಶನ ನೀಡಿದ್ದು, ಮಲ್ಲಮ್ಮ ಹೊಲದಲ್ಲಿ ಕೂರಿಗೆಯಲ್ಲಿ ಬಿತ್ತನೆ ಮಾಡುವುದು, ದನಕರುಗಳನ್ನು ಕಾಯುವುದು, ಹಾಲು ಕರೆಯುವುದು, ಗಂಡನ ಮನೆಯಲ್ಲಿ ಬೀಸುವುದು, ಮಜ್ಜಿಗೆ ಕಡೆಯುವುದು.. ಇತ್ಯಾದಿ ಪ್ರತಿಮೆಗಳು ದೇವಾಲಯದಲ್ಲಿ ಪರಿಸರದ ಸೌಂದರ್ಯವನ್ನು ಹೆಚ್ಚಿಸುವುದರೊಂದಿಗೆ ಮಲ್ಲಮ್ಮನ ಇತಿಹಾಸವನ್ನೂ ಅರುಹುತ್ತಿವೆ. ಗರ್ಭಗುಡಿಯಲ್ಲಿ ಎಡಗೈಯಲ್ಲಿ ಶಿವಲಿಂಗುವನ್ನು ಹಿಡಿದು ತಲೆತುಂಬ ಸೆರಗು ಹೊದ್ದು ಕುಳಿತು ಪ್ರಾರ್ಥನೆಯಲ್ಲಿ ತೊಡಗಿರುವ ಭಂಗಿಯ ಹೇಮರಡ್ಡಿ ಮಲ್ಲಮ್ಮನ ಪ್ರತಿಮೆ ಮನಮೋಹಕವಾಗಿದೆ. ಮಲ್ಲಮ್ಮ ಬಳಸುತ್ತಿದ್ದ ಒಳಕಲ್ಲು, ಬೀಸುವ ಕಲ್ಲು, ಒನಕೆಗಳನ್ನು ಈಗಲೂ ಕಾಣಬಹುದು.

ಮೊದಲು ಇಲ್ಲಿ ಒಂದು ಗುಡಿಸಲಿನಂತಹ ಪುಟ್ಟ ದೇವಾಲಯವಿತ್ತು. ಅಲ್ಲಿ